359 (436) ಶ್ರೀ ಶಿವರಾಜ ಸಜ್ಜನರ್ (ಹಾವೇರಿ): ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ತಾಲ್ಲೂಕಿನ ತಿಮ್ಮಾಪುರ ಏತ ನೀರಾವರಿ ಯೋಜನೆಗೆ ಪ್ರಸ್ತುತ ಹಣಕಾಸು ವರ್ಷದಲ್ಲಿ ತೊಡಗಿಸಿದ ಹಣವೆಷ್ಟು?

ಆ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಪ್ರಸ್ತುತ ಸಾಲಿನ ಅಯವ್ಯಯದಲ್ಲಿ ಈ ಯೋಜನೆಗೆ ರೂ.27.00 ಲಕ್ಷ ಅನುದಾನವನ್ನು ಒದಗಿಸಲಾಗಿದೆ.

ಆ) ಈ ಕಾಮಗಾರಿಗೆ ಈಗಾಗಲೇ ಸವಿಸ್ತಾರವಾದ ಯೋಜನಾ ವರದಿಯನ್ನು ತಯಾರಿಸಿ ಭಾರಿ ನೀರಾವರಿ ಯೋಜನೆಗಳ ನಿಯಂತ್ರಣ ಮಂಡಳಿಯ (ಎಂ.ಐ.ಪಿ.ಸಿ ಬೋರ್ಡ್) ಅನುಮೋದನೆಗಾಗಿ ಮಂಡಿಸಲಾಗಿದ್ದು, ಅನುಮೋದನೆಯ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

360 (903) ಶ್ರೀ ಸಿದ್ದು ಸಾವದಿ (ಜಮಖಂಡಿ): ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಡಿಹುಡಿ ತೊದಲಬಾಗಿ ಏತ ನೀರಾವರಿ, ಸರ್ಕಾರ ಅಥವಾ ಖಾಸಗಿ ಇವರೆಡರಲ್ಲಿ ಒಳಪಟ್ಟಿರುವುದು ಯಾರಿಗೆ;

ಆ) ಸರ್ಕಾರದ ಉಸ್ತುವಾರಿಯಲ್ಲಿ ಕೆಲಸ ಕಾರ್ಯಗಳು ಜರುಗಿಲ್ಲವೇಕೆ;

ಇ) ಉಸ್ತುವಾರಿಗಾಗಿ ರೈತರಿಂದ ಅನಧಿಕೃತವಾಗಿ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಸಂಗ್ರಹವಾಗಿರುವ ಹಣವೆಷ್ಟು; ಹಾಗೂ ಖರ್ಚು ಮಾಡಲಾಗಿರುವ ಹಣವೆಷ್ಟು;

ಈ) ಏತ ನೀರಾವರಿಗೆ ಒಳಪಡುವ (ಕಮಾಂಡ್) ಪ್ರದೇಶಗಳೆಷ್ಟು; ಈವರೆಗೆ ಎಷ್ಟು ಎಕರೆ ಪ್ರದೇಶಕ್ಕೆ ನೀರು ಬಿಡಲಾಗಿದೆ; ಹಾಗೂ ಈ ವರ್ಷದಲ್ಲಿ ಎಷ್ಟು ಎಕರೆ ಪ್ರದೇಶಕ್ಕೆ ನೀರನ್ನು ಕೊಡಲಾಗುವುದು;

ಉ) ಭೀಕರ ಬರಗಾಲದಲ್ಲಿ ಸಮೀಪದ ಏತ ನೀರಾವರಿಯಿಂದ ಕೆರೆಗೆ ನೀರು ಬಿಡಲು ಸರ್ಕಾರದ ಆದೇಶ ಆಗಿದೆಯೇ; ಆಗಿದ್ದಲ್ಲಿ, ಅರ್ಧ ಕಿ.ಮೀ.ನಲ್ಲಿ ಹತ್ತಾರು ಹಳ್ಳಿಗಳಿಗೆ ಕುಡಿಯುವ ನೀರು ಸಿಗುವ ತೊದಲಬಾಗಿ ಕೆರೆಯನ್ನು ತುಂಬಿಸಿಲ್ಲವೇಕೆ;

ಊ) ಹಾಗಿದ್ದಲ್ಲಿ, ನೀರು ಬಿಡದೇ, ರೈತರಿಗೆ ಆಗಿರುವ ಹಾನಿಯೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ):

ಅ) ಸರ್ಕಾರಕ್ಕೆ ಒಳಪಟ್ಟಿರುತ್ತದೆ.

ಆ) ಸರ್ಕಾರದ ಉಸ್ತುವಾರಿಯಲ್ಲಿಯೇ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ.

ಇ) ರೈತರಿಂದ ಅನಧಿಕೃತವಾಗಿ ಹಣ ವಸೂಲಿ ಮಾಡುತ್ತಿರುವುದು ತಿಳಿದು ಬಂದಿಲ್ಲ.

ಈ) ಅಡಿಹುಡಿ-ತೊದಲಬಾಗಿ ಏತ ನೀರಾವರಿ ಯೋಜನೆಯ ನೀರಾವರಿಗೆ ಒಳಪಡುವ ಅಚ್ಚುಕಟ್ಟು ಪ್ರದೇಶ 2410 ಎಕರೆ ಇರುತ್ತದೆ. ಕಳೆದ ಸಾಲಿನಲ್ಲಿ 3223 ಎಕರೆ ಪ್ರದೇಶಕ್ಕೆ ನೀರು ಬಿಡಲಾಗಿದೆ. ಈ ವರ್ಷ 2410 ಎಕರೆ ಪ್ರದೇಶಕ್ಕೆ ನೀರು ಒದಗಿಸಲಾಗುವುದು.

ಉ) ನೀರು ಬಿಡಲು ಸರ್ಕಾರದಿಂದ ಅಧಿಕೃತ ಆದೇಶ ಹೊರಡಿಸಿಲ್ಲ. ಆದರೆ, ಜನ ಜಾನುವಾರುಗಳ ಅನುಕೂಲಕ್ಕಾಗಿ ಕೆರೆಗೆ ನೀರನ್ನು ಬಿಡಲಾಗಿದ್ದು, ಸಿಲ್ ಲೆವೆಲ್‌ವರೆಗೆ 8 ಅಡಿ ನೀರು ಸಂಗ್ರಹಿಸಲಾಗಿದೆ.

ಊ) ಕೆರೆಗೆ ನೀರನ್ನು ಬಿಟ್ಟಿರುವುದರಿಂದ ರೈತರಿಗೆ ಹಾನಿಯ ಪ್ರಶ್ನೆ ಉದ್ಭವಿಸುವುದಿಲ್ಲ.

361 (904) ಶ್ರೀ ಸಿದ್ದು ಸವದಿ (ಜಮಖಂಡಿ): ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಹಿಪ್ಪರಗಿ ಅಣೆಕಟ್ಟಿನಲ್ಲಿ ಮುಳುಗಡೆಯಾಗಿರುವ ಹಳ್ಳಿಗಳಾವುವು; ಪ್ರತಿ ಹಳ್ಳಿಯಲ್ಲಿ ಎಷ್ಟು ಎಕರೆ ಜಮೀನು ಮುಳುಗಡೆಗೊಂಡಿದೆ: (ವಿವರ ನೀಡುವುದು);

ಆ) ಮುಳುಗಡೆಗೊಂಡಿರುವ ಜಮೀನುಗಳ ಸರ್ವೆ ಕಾರ್ಯ ಮುಗಿದಿದೆಯೇ;

ಇ) ಸರ್ವೆ ಮಾಡಿದರೂ ಹೆಚ್ಚು ಮುಳುಗಡೆಗೊಂಡ ಜಮೀನುಗಳಿಗೆ ಪರಿಹಾರ ನೀಡುವುದು ಯಾವಾಗ;

ಈ) ರಸ್ತೆಗಳು ಮುಳುಗಡೆಯಾಗಿದ್ದು, ಹಾಗೂ ನಡುಗಡ್ಡೆಗಳಾಗಿರುವುದು ಜಮೀನುಗಳ ರಸ್ತೆಗಳನ್ನು ಎತ್ತರಿಸಿ ಕೊಡುವುದು ಯಾವಾಗ; ಅಂತಹ ಜಮಖಂಡಿ ತಾಲ್ಲೂಕಿನಲ್ಲಿ ಬರುವ ರಸ್ತೆಗಳೆಷ್ಟು;

ಉ) ಹಿಪ್ಪರಗಿ ಅಣೆಕಟ್ಟು ಸಂತ್ರಸ್ತ ರೈತರಿಗೆ ಇಲ್ಲಿಯವರೆಗೆ ನೋಂದಣಿ ಶುಲ್ಕ ರಿಯಾಯಿತಿಯನ್ನು ಕೊಟ್ಟಿರುವುದಿಲ್ಲವೇಕೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಸಚಿವರು):

ಅ) ಹಿಪ್ಪರಗಿ ಅಣೆಕಟ್ಟಿನ ಅಡಿಯಲ್ಲಿ ಯಾವುದೇ ಜನವಸತಿ ಹಳ್ಳಿಗಳು ಮುಳುಗಡೆಯಾಗುವುದಿಲ್ಲ. ಆದರೆ ಈ ಯೋಜನೆಯಡಿಯಲ್ಲಿ 47 ಹಳ್ಳಿಗಳ ಜಮೀನು ಮುಳುಗಡೆಯಾಗಿದ್ದು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಮುಳುಗಡೆ ಜಮೀನುಗಳ ಸರ್ವೆ ಕಾರ್ಯ ಮುಗಿದಿರುತ್ತದೆ.

ಇ) ಹೆಚ್ಚುವರಿ ಮುಳುಗಡೆಯಾಗಿರುವ ಜಮೀನುಗಳ ಸರ್ವೆ ಕಾರ್ಯವು ಮುಗಿದಿದ್ದು, ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಈ) ಮುಳುಗಡೆಯಾದ ರಸ್ತೆಗಳು ಹಾಗೂ ನಡುಗಡ್ಡೆಗಳಾಗಿರುವ ಜಮೀನುಗಳಿಗೆ ರಸ್ತೆ ಎತ್ತರಿಸುವಂತವು ಜಮಖಂಡಿ ತಾಲ್ಲೂಕಿನಲ್ಲಿ ಐದು ರಸ್ತೆಗಳು ಬರುತ್ತಿದ್ದು, ಅವುಗಳನ್ನು ಜೂನ್ 2005 ರೊಳಗಾಗಿ ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಉ) ಹಿಪ್ಪರಗಿ ಅಣೆಕಟ್ಟು ಸಂತ್ರಸ್ತ ರೈತರಿಗೆ ನೋಂದಣಿ ಶುಲ್ಕ ರಿಯಾಯಿತಿ ಕುರಿತು ವಿಷಯವು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.